# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 76 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 08.12.2025 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಡವರ ಬಿಪಿಎಲ್ ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಗಳಾಗಿ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು) | ಅರ್ಹ ಆದ್ಯತಾ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಿರುವುದಿಲ್ಲ. |
| ಆ | ಬಿಪಿಎಲ್ ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಗಳಾಗಿ ವರ್ಗಾವಣೆಯಾಗಿರುವುದರಿಂದ ಬಡವರು ಕೂಲಿ ಕಾರ್ಮಿಕರು, ಆಟೋ ಚಾಲಕರು ಬೀದಿ ಬದಿ ವ್ಯಾಪಾರಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅರ್ಹ ಆದ್ಯತಾ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಿರುವುದಿಲ್ಲ. ಆದಾಗ್ಯೂ ಈ ರೀತಿ ತಾತ್ಕಾಲಿಕವಾಗಿ ಆದ್ಯತೇತರ ಪಡಿತರ ಚೀಟಿಯನ್ನಾಗಿ (NPHH) ಪರಿವರ್ತಿಸಲಾದ ಪಡಿತರ ಚೀಟಿದಾರರು ಆದ್ಯತಾ ಚೀಟಿ ಹೊಂದಲು (PHH) ಅರ್ಹರಾಗಿದ್ದಲ್ಲಿ 45 ದಿನದೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಸಂಬಂಧ ಪಟ್ಟ ತಾಲ್ಲೂಕಿನ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದಲ್ಲಿ ಸದರಿ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಆದ್ಯತಾ ಪಡಿತರ ಚೀಟಿ ಹೊಂದಲು ಅರ್ಹರಿದ್ದಲ್ಲಿ ಅಂತಹವರ ಆದ್ಯತಾ ಪಡಿತರ ಚೀಟಿಯನ್ನು (PHH) ಮರುಸ್ಥಾಪಿಸಲು ಕ್ರಮವಹಿಸಲಾಗುತ್ತದೆ. |
| ಇ | ಬಂದಿದ್ದಲ್ಲಿ, ಸದರಿಯವರಿಗೆ ಬಿಪಿಎಲ್ ಪಡಿತರ ಚೀಟಿಗಳನ್ನಾಗಿ ವರ್ಗಾಯಿಸಲು ಎಷ್ಟು ಸಮಯಾವಕಾಶ ಬೇಕಾಗುತ್ತದೆ; | |
| ಈ | ಇದರಿಂದಾಗಿ ಭಾಗ್ಯಲಕ್ಷ್ಮಿ ಸೌಲಭ್ಯ ಪಡೆಯಲು, ಕ್ಯಾನ್ಸರ್, ಹೃದಯ ಚಿಕಿತ್ಸೆ, ಕಿಡ್ನಿ ಸಮಸ್ಯೆ ಮುಂತಾದ ಭಯಾನಕ ಖಾಯಿಲೆಗಳಿಗೆ ಉಚಿತ ಅಥವಾ ರಿಯಾಯಿತಿ ಚಿಕಿತ್ಸೆ ಪಡೆಯಲು ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು | ವೈದ್ಯಕೀಯ ತುರ್ತು ಪರಿಸ್ಥಿತಿ ಹಿನ್ನೆಲೆ ಇರುವ ಅರ್ಹ ಫಲಾನುಭವಿಗಳಿಗೆ ಆದ್ಯತಾ ಪಡಿತರ ಚೀಟಿ ಪಡೆಯಲು ಆಹಾರ ತಂತ್ರಾಂಶದಲ್ಲಿ ಪ್ರತ್ಯೇಕವಾಗಿ ವೈದ್ಯಕೀಯ ತುರ್ತು ಪರಿಸ್ಥಿತಿ ಮಾಡ್ಯೂಲ್‌ನಲ್ಲಿ ಅಭಿವೃದ್ಧಿ ಪಡಿಸಿದ್ದು, ಸದರಿ ಮಾಡ್ಯೂಲ್ ಮೂಲಕ ನಿರಂತರವಾಗಿ ಆದ್ಯತಾ ಪಡಿತರ ಚೀಟಿ ಪಡೆಯಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. |

| | | |
|---|---|---|
| | ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಉ | ಬಂದಿದ್ದಲ್ಲಿ, ಬಡವರ ಅನುಕೂಲಕ್ಕಾಗಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; | |
| ಊ | ರಾಜ್ಯದಲ್ಲಿ ಹೊಸದಾಗಿ ಬಿಪಿಎಲ್ ಪಡಿತರ ಚೀಟಿ ಪಡೆಯಲು ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿ ಕೋರಿ ಒಟ್ಟು 3,22,468 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಋ | ಹೊಸ ಪಡಿತರ ಚೀಟಿಗಳನ್ನು ಎಷ್ಟು ಸಮಯದೊಳಗೆ ನೀಡಲಾಗುತ್ತದೆ? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ ಇ-ಆನಾಸ 159 ಡಿಆರ್ಎ 2025 (1799818) ದಿನಾಂಕ: 30.10.2025. ರನ್ವಯ ಆದ್ಯತಾ ಪಡಿತರ ಚೀಟಿಗಳನ್ನು ಹೊಂದಿರುವ ಅನರ್ಹರನ್ನು ಪತ್ತೆ ಹಚ್ಚಿ ಅವುಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ (NPHH) ಪರಿವರ್ತಿಸಲಾಗುತ್ತಿದೆ. ನಂತರ ಅಷ್ಟೇ ಸಂಖ್ಯೆಯ ಆದ್ಯತಾ ಪಡಿತರ ಚೀಟಿಗಳನ್ನು (PHH) ಹೊಸದಾಗಿ ಅರ್ಹ ಫಲಾನುಭವಿಗಳಿಗೆ ನೀಡುವಂತೆ ಕ್ರಮವಹಿಸಲು ಆದೇಶಿಸಲಾಗಿದ್ದು, ಅದರನ್ವಯ ಈಗಾಗಲೇ ಆದ್ಯತಾ ಪಡಿತರ ಚೀಟಿ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿರುತ್ತದೆ. |

**ಇ-ಆನಾಸ 300 ಡಿಆರ್ಎ 2025**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು

## ಅನುಬಂಧ-01

## ಶ್ರೀ ಬಲ್ಕೀಸ್ ಬಾನು(ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 76.

| ಕ್ರ. ಸಂ. | ಜಿಲ್ಲೆಗಳು | ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 13,658 |
| 2 | ಬಳ್ಳಾರಿ | 10,709 |
| 3 | ಬೆಂಗಳೂರು ಪೂರ್ವ | 5,266 |
| 4 | ಬೆಂಗಳೂರು ಉತ್ತರ | 4,122 |
| 5 | ಬೆಂಗಳೂರು ದಕ್ಷಿಣ | 4,220 |
| 6 | ಬೆಂಗಳೂರು ಪಶ್ಚಿಮ | 10,750 |
| 7 | ಬೆಳಗಾವಿ | 39,019 |
| 8 | ಬೆಂಗಳೂರು | 18,035 |
| 9 | ಬೆಂಗಳೂರು ಗ್ರಾಮಾಂತರ | 5,972 |
| 10 | ಬೀದರ್ | 17,671 |
| 11 | ಚಾಮರಾಜನಗರ | 3,041 |
| 12 | ಚಿಕ್ಕಬಳ್ಳಾಪುರ | 4,468 |
| 13 | ಚಿಕ್ಕಮಗಳೂರು | 3,303 |
| 14 | ಚಿತ್ರದುರ್ಗ | 7,024 |
| 15 | ದಕ್ಷಿಣ ಕನ್ನಡ | 811 |
| 16 | ದಾವಣಗೆರೆ | 2,806 |
| 17 | ಧಾರವಾಡ | 12,337 |
| 18 | ಗದಗ | 6,707 |
| 19 | ಹಾಸನ | 5,056 |
| 20 | ಹಾವೇರಿ | 9,514 |
| 21 | ಕಲಬುರಗಿ | 36,037 |
| 22 | ಕೊಡಗು | 1,503 |
| 23 | ಕೋಲಾರ | 3,352 |
| 24 | ಕೊಪ್ಪಳ | 11,446 |

| | | |
|---|---|---|
| 25 | ಮಂಡ್ಯ | 3,395 |
| 26 | ಮೈಸೂರು | 6.860 |
| 27 | ರಾಯಚೂರು | 18.111 |
| 28 | ರಾಮನಗರ | 3,552 |
| 29 | ಶಿವಮೊಗ್ಗ | 3,610 |
| 30 | ತುಮಕೂರು | 9,574 |
| 31 | ಉಡುಪಿ | 502 |
| 32 | ಉತ್ತರ ಕನ್ನಡ | 1,751 |
| 33 | ವಿಜಯನಗರ | 5,139 |
| 34 | ವಿಜಯಪುರ | 24,923 |
| 35 | ಯಾದಗಿರಿ | 8,224 |
| | **TOTAL** | **3,22,468** |

Joint Director (IT)
Food, Civil Supplies
And Consumer Affairs
Department